# ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015ರ

## ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮ–2016 ರಲ್ಲಿ ನಿರೂಪಿತವಾಗಿರುವ ನಮೂನೆಗಳ ವರ್ಗೀಕರಣದ ವಿವರ.

| ನಮೂನೆ ಸಂಖ್ಯೆ | ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2016 ನಿಯಮಾವಳಿಗಳ ವಿಧಗಳು. | ನಮೂನೆಯ ವಿವರ | ವಿವರ/ ಷರಾ |
|---|---|---|---|
| ನಮೂನೆ–1 | ನಿಯಮಗಳು 8(1) ಮತ್ತು 8(5) | ಸಾಮಾಜಿಕ ಹಿನ್ನೆಲೆ ವರದಿ. **(Social Background Report-SBR)** | 18 ವರ್ಷದೊಳಗಿನ ಯಾವುದೇ ಮಗು ಘೋರ ಅಪರಾಧ ಎಂದು ನಿರೂಪಿತವಾದ ಕಾನೂನುಗಳನ್ನು ಉಲ್ಲಂಘಿಸಿ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವನ್ನು ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರಪಡಿಸುವ ಸಂದರ್ಭದಲ್ಲಿ ಈ ಸಾಮಾಜಿಕ ಹಿನ್ನೆಲೆಯ ಮಾಹಿತಿಯನ್ನು ಒಳಗೊಂಡ ವರದಿಯೊಂದಿಗೆ ಹಾಜರುಪಡಿಸತಕ್ಕದ್ದು. 18 ವರ್ಷದೊಳಗಿನ ಯಾವುದೇ ಮಗು ಘೋರವಲ್ಲದ ಅಪರಾಧ ಎಂದು ನಿರೂಪಿತವಾದ ಕಾನೂನುಗಳನ್ನು ಉಲ್ಲಂಘಿಸಿದಲ್ಲಿ ಕೇವಲ ಈ ವರದಿಯನ್ನು ಮಾತ್ರ ಮಂಡಳಿಗೆ ಸಲ್ಲಿಸಬಹುದಾಗಿದೆ. |
| ನಮೂನೆ–2 | ನಿಯಮಗಳು 8(7) | ಪಾಲಕರು ಅಥವಾ ಪೋಷಕರು ಅಥವಾ ಅರ್ಹ ವ್ಯಕ್ತಿಯಿಂದ ಪಡೆಯುವ ಕರಾರು ಪತ್ರ. **(UNDERTAKING BY THE PARENT OR GUARDIAN OR FIT PERSON GIVEN INTERIM CUSTODY PENDING INQUIRY)** | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಪ್ರಕರಣವನ್ನು ವಿಚಾರಣೆಯಲ್ಲಿ ಬಾಕಿಯಿರಿಸಿ, ಮಧ್ಯಂತರದಲ್ಲಿ ಬಾಲ ನ್ಯಾಯ ಮಂಡಳಿಯ ಅಥವಾ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಮಗುವಿನ ಪಾಲಕ ಅಥವಾ ಪೋಷಕರ ಅಥವಾ ಅರ್ಹ ವ್ಯಕ್ತಿಗೆ ಮಗುವನ್ನು ಬಿಡುಗಡೆಗೊಳಿಸುವ ಸಂದರ್ಭದಲ್ಲಿ ಅವರಿಂದ ಪಡೆದುಕೊಳ್ಳಬೇಕಾದ ಕರಾರು ಪತ್ರದ ನಮೂನೆ. |
| ನಮೂನೆ–3 | ನಿಯಮ 10(1) (iii) | ಮೇಲ್ವಿಚಾರಣಾ ಆದೇಶ. **(SUPERVISION ORDER)** | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಪ್ರಕರಣವನ್ನು ವಿಚಾರಣೆಯಲ್ಲಿ ಬಾಕಿಯಿರಿಸಿ ಮಗುವನ್ನು ಮಧ್ಯಂತರದಲ್ಲಿ ಬಿಡುಗಡೆಗೊಳಿಸಿದ ಸಂದರ್ಭದಲ್ಲಿ ಪರಿವೀಕ್ಷಣಾಧಿಕಾರಿಗಳಿಗೆ ನಿರ್ದಿಷ್ಟಪಡಿಸಿದ ಅವಧಿಯವರೆಗೆ ಮೇಲ್ವಿಚಾರಣೆಗಾಗಿ ಬಾಲ ನ್ಯಾಯ ಮಂಡಳಿಯು ಹೊರಡಿಸುವ ಮೇಲ್ವಿಚಾರಣಾ ಆದೇಶದ ನಮೂನೆ. |
| ನಮೂನೆ–4 | ನಿಯಮ 10(1) (iv) | ಅವಲೋಕನಾ ಗೃಹ ಅಥವಾ ಅರ್ಹ ಸಂಸ್ಥೆಯಲ್ಲಿರಿಸಲು ಆದೇಶ. **(ORDER OF PLACING A CHILD IN CHILD CARE INSTITUTION PENDING INQUIRY)** | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿನ ಪ್ರಕರಣವನ್ನು ವಿಚಾರಣೆಯಲ್ಲಿ ಬಾಕಿಯಿರಿಸಿ ಮಗುವನ್ನು ಅದಕ್ಕೆ ಸೂಕ್ತವೆನಿಸುವ ಸ್ಥಳದಲ್ಲಿಡಲು (ಸಂಸ್ಥೆಯಲ್ಲಿರಿಸಲು) ಬಾಲ ನ್ಯಾಯ ಮಂಡಳಿ ಹೊರಡಿಸುವ ಆದೇಶದ ನಮೂನೆ. |

| | | | |
|---|---|---|---|
| ನಮೂನೆ–5 | ನಿಯಮ 10(2) | ಸಾಮಾಜಿಕ ತನಿಖಾ ವರದಿಗಾಗಿ ಆದೇಶ. **(ORDER FOR SOCIAL INVESTIGATION REPORT)** | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿಗೆ ಸೂಕ್ತ ಪುನರ್ವಸತಿಯನ್ನು ಕಲ್ಪಿಸಲು ಮಗುವಿನ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮನೋ–ಸಾಮಾಜಿಕ ಮಾಹಿತಿಯನ್ನು ಸಂಗ್ರಹಿಸಿ ವರದಿಯನ್ನು ಸಲ್ಲಿಸಲು ಪರಿವೀಕ್ಷಣಾಧಿಕಾರಿ, ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ, ಯಾರೇ ಸಮಾಜ ಕಾರ್ಯಕರ್ತರಿಗೆ ಬಾಲ ನ್ಯಾಯ ಮಂಡಳಿಯು ನಿರ್ದೇಶಿಸುವಾಗ ಹೊರಡಿಸುವ ಆದೇಶದ ನಮೂನೆ. |
| ನಮೂನೆ–6 | ನಿಯಮಗಳು 10(9), 11(2), 64(1) ಮತ್ತು 64 (3) (i) | ಸಾಮಾಜಿಕ ತನಿಖಾ ವರದಿ. **(Social Investigation Report-SIR for CCL Childrens)** | ಕಾನೂನಿನೊಡನೆ ಸಂಘರ್ಷದಲ್ಲಿರುವ ಮಗುವಿಗೆ ಸೂಕ್ತ ಪುನರ್ವಸತಿಯನ್ನು ಕಲ್ಪಿಸಲು ಅವಶ್ಯವಾದ ಮಗುವಿನ ವೈಯಕ್ತಿಕ, ಸಾಮಾಜಿಕ, ಮನೋ–ಸಾಮಾಜಿಕ, ಅಂಶಗಳನ್ನು ಒಳಗೊಂಡಂತೆ, ತಜ್ಞರ ಶಿಫಾರಸ್ಸು ಹಾಗೂ ತನಿಖಾ ವರದಿಗಾರನ ಶಿಫಾರಸ್ಸುನ್ನು ಒಳಗೊಂಡ ವರದಿ. |
| ನಮೂನೆ–7 | ನಿಯಮಗಳು 11(3), 13(7) (vi), 13(8) (ii) 19(4), 19(17), 62(06) (vii),62(6) .(x) ಮತ್ತು 69(ಐ)(3) | ವೈಯಕ್ತಿಕ ಪೋಷಣಾ ಯೋಜನೆ. **(Individual Care Plan- ICP)** | ಕಾನೂನಿನೊಡನೆ ಸಂಘರ್ಷಕ್ಕೊಳಗಾಗಿ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರಾದ ಮತ್ತು ಪೋಷಣೆ ಮತ್ತು ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾದ ಅಥವಾ ಯಾವುದೇ ಸಂಸ್ಥೆಯಲ್ಲಿ ದಾಖಲಾದ ಮಗುವಿನ ವೈಯಕ್ತಿಕ ಬೇಕು, ಬೇಡಿಕೆ, ಆಸಕ್ತಿ, ಸಮಸ್ಯೆಗಳು, ಶಕ್ತಿಗಳನ್ನು ಗುರುತಿಸಿ, ತಜ್ಞರ ಶಿಪ್ಪಾರಸ್ಸಿನ ಆಧಾರದ ಮೇಲೆ ಅವನ/ಳ ಪುನರ್ವಸತಿಗಾಗಿ, ರೂಪಿಸುವ ಕ್ರೀಯಾ ಯೋಜನಾ ವರದಿ. (ಇದು ಆ ಮಗುವಿನ ಬೆಳವಣಿಗೆ, ಅಭಿವೃದ್ಧಿ ಮತ್ತು ಪುನರ್ವಸತಿಯ ನೀಲಿ ನಕ್ಷೆಯಿದ್ದಂತೆ). |
| ನಮೂನೆ–8 | ನಿಯಮ 11(6) | ಜಾಮೀನುದಾರರು ನೀಡಬೇಕಾದ ಮುಚ್ಚಳಿಕೆ ಪತ್ರ. **(UNDERTAKING/ BOND TO BE EXECUTED BY A PARENT/ GUARDIAN/ /FIT PERSON IN WHOSE CARE A CHILD IN CONFLICT WITH LAW IS PLACED)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗುವನ್ನು ಅವರ ಪಾಲಕ, ಪೋಷಕ ಅಥವಾ ಅರ್ಹ ವ್ಯಕ್ತಿಗೆ ಆತನ ಜವಾಬ್ದಾರಿಯ ಮೇಲೆ ಬಿಡುಗಡೆಗೊಳಿಸುವ ಸಂದರ್ಭದಲ್ಲಿ ಅವರು ಬಾಲ ನ್ಯಾಯ ಮಂಡಳಿಗೆ ನೀಡಬೇಕಾದ ಮುಚ್ಚಳಿಕೆ ಪತ್ರದ ನಮೂನೆ. |
| ನಮೂನೆ–9 | ನಿಯಮ 11(7) | ಮಗುವಿನ ವೈಯಕ್ತಿಕ ಮುಚ್ಚಳಿಕೆ ಪತ್ರ. **(PERSONAL BOND BY CHILD)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗುವನ್ನು ವಶಕ್ಕೆ ಪಡೆಯಲು ಅವರ ಪಾಲಕ, ಪೋಷಕ ಅಥವಾ ಅರ್ಹ ವ್ಯಕ್ತಿಗಳು ಯಾರೂ ಮುಂದೆ ಬರದಿದ್ದಲ್ಲಿ, ಸ್ವತಃ ಮಗುವಿನ ವೈಯಕ್ತಿಕ ಮುಚ್ಚಳಿಕೆ ಪತ್ರದ ಮೇಲೆ ಬಿಡುಗಡೆಗೊಳಿಸುವ ಸಂದರ್ಭದಲ್ಲಿ ಮಗುವಿನಿಂದ ಪಡೆಯಬೇಕಾದ ಮುಚ್ಚಳಿಕೆ ಪತ್ರದ ನಮೂನೆ. |
| ನಮೂನೆ–10 | ನಿಯಮಗಳು 11(9) ಮತ್ತು 64(3) (xiii) | ಪ್ರೋಬೇಷನ್ ಅಧಿಕಾರಿಯಿಂದ ನಿಯತಕಾಲಿಕ ವರದಿ. **(PERIODIC REPORT BY PROBATION OFFICER WHEN A CHILD IS RELEASED ON PROBATION)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗುವನ್ನು ಪ್ರೋಬೇಷನ್ ಅವಧಿಯ ಮೇಲೆ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಮಗುವಿನ ವೈಯಕ್ತಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಳನ್ನು ಗಮನಿಸಿ ಬಾಲ ನ್ಯಾಯ ಮಂಡಳಿಗೆ ವರದಿಯನ್ನು ಸಲ್ಲಿಸುವಂತೆ ಪ್ರೋಬೇಷನ್ ಅಧಿಕಾರಿಗಳಿಗೆ ನಿರ್ದೇಶಿಸುವ ನಮೂನೆ. |

| | | | |
|---|---|---|---|
| ನಮೂನೆ–11 | ನಿಯಮ 12(1) | ಪ್ರಕರಣ ಮೇಲ್ವಿಚಾರಣೆಯ ಮುಖಪುಟ.<br>**(CASE MONITORING SHEET)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗುವಿನ ಪ್ರಕರಣದ ಕುರಿತಾಗಿ ಹಾಗೂ ಪ್ರಸ್ತುತ ಸಂದರ್ಭದ ಮಾಹಿತಿಯನ್ನು ಬಾಲ ನ್ಯಾಯ ಮಂಡಳಿಗೆ ನೀಡುವ ಪ್ರಕರಣದ ಮುಖಪುಟ. ಒಂದಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಪ್ರತ್ಯೇಕ ಮುಖಪುಟ (ಸಾರಾಂಶ) ಮಾಡುವ್ಯದು. |
| ನಮೂನೆ–12 | ನಿಯಮ 12(2) | ಮಕ್ಕಳ ನ್ಯಾಯ ಮಂಡಳಿ ನೀಡುವ ತ್ರೈಮಾಸಿಕ ಪ್ರಗತಿ ವರದಿ ನಮೂನೆ.<br>**(QUARTERLY REPORT BY JUVENILE JUSTICE BOARD.)** | ಬಾಲ ನ್ಯಾಯ ಮಂಡಳಿಯು ಜಿಲ್ಲಾ ನ್ಯಾಯಾಧೀಶರು, ಜಿಲ್ಲಾ ದಂಡಾಧಿಕಾರಿಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಲ್ಲಿಸಬೇಕಾದ ಪ್ರಗತಿ ವರದಿಯ ನಮೂನೆ. |
| ನಮೂನೆ–13 | ನಿಯಮ 13(8) (iv), | ನಿಯತಕಾಲಿಕ ಪ್ರಗತಿ ವರದಿಯ ನಮೂನೆ.<br>**(PERIODIC REVIEW OF A CHILD IN PLACE OF SAFETY)** | ಬಾಲ ನ್ಯಾಯ ಮಂಡಳಿಯಿಂದ ಕಳುಹಿಸಲ್ಪಟ್ಟ ಮಗುವಿನ ಪೋಷಣೆ ಮತ್ತು ರಕ್ಷಣೆಯ ಜವಾಬ್ದಾರಿಯನ್ನು ನಿಬಾಯಿಸುತ್ತಿರುವ ಸಂಸ್ಥೆಯು ಬಾಲ ನ್ಯಾಯ ಮಂಡಳಿಗೆ ಮಗುವಿನ ಪ್ರಗತಿ ಕುರಿತಾಗಿ ಪ್ರತಿ ಮಾಹೆ ಸಲ್ಲಿಸಬೇಕಾದ ನಮೂನೆ. |
| ನಮೂನೆ–14 | ನಿಯಮಗಳು 7 (i)( ii), 13(8), (vi)(ಸಿ), 13(8)( vi) (ಸಿಡಿ), 17 (vi), 19(20), 65(3)( viii), 69(ಇ)(2), 69(ಐ)(4), 69 (ಜೆ)(1) 69 (ಜೆ)(3), | ಪುನರ್ವಸತಿ ಪತ್ರ (ಕಾರ್ಡ್).<br>**(Rehabilitation Card)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ, ಪೋಷಣೆ ಮತ್ತು ರಕ್ಷಣೆಯ ಮಗುವನ್ನು ಸಂಸ್ಥೆಯಲ್ಲಿ ದಾಖಲಿಸಿಕೊಂಡ ನಂತರ, ಆ ಮಗುವಿನ ಪುನರ್ವಸತಿಗಾಗಿ ಸಂಸ್ಥೆಗೆ ನೀಡುವ, ಆ ಮಗು ಅರಿತುಕೊಂಡ ವಿಷಯಗಳ ಬಗ್ಗೆ ಬಾಲ ನ್ಯಾಯ ಮಂಡಳಿಯು ನೀಡುವ ಮೌಲ್ಯ ಮಾಪನ ವರದಿ ಅಥವಾ ಪುನರ್ವಸತಿ ಪತ್ರ (ಕಾರ್ಡ್). |
| ನಮೂನೆ–15 | ನಿಯಮ 17 (i) | ಮಕ್ಕಳ ಕಲ್ಯಾಣ ಸಮಿತಿಯಿಂದ ನಿರ್ವಹಿಸಲ್ಪಟ್ಟ ಪ್ರಕರಣದ ಮುಖಪುಟ. (ಸಾರಾಂಶ)<br>**(CASE SUMMARY MAINTAINED BY THE CHILD WELFARE COMMITTEE)** | ಪೋಷಣೆ ಮತ್ತು ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾದ ಮಗುವಿನ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿ ನಡೆಸಿದ ಮೌಲ್ಯ ಮಾಪನ ಹಾಗೂ ಕಲ್ಪಿಸಲಾದ ಪುನರ್ವಸತಿ ಬಗ್ಗೆ ನೀಡುವ ಸಾರಾಂಶ ವರದಿ. |
| ನಮೂನೆ–16 | ನಿಯಮಗಳು 17(v) ಮತ್ತು 20(2) | ಮಕ್ಕಳ ಕಲ್ಯಾಣ ಸಮಿತಿಯ ತ್ರೈ ಮಾಸಿಕ ವರದಿ.<br>**(QUARTERLY REPORT BY CHILD WELFARE COMMITTEE)** | ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹಾಗೂ ಕೇಂದ್ರ ಕಛೇರಿಗೆ ಮಕ್ಕಳ ಕಲ್ಯಾಣ ಸಮಿತಿಯು ಸಲ್ಲಿಸಬೇಕಾದ ತ್ರೈ ಮಾಸಿಕ ಪ್ರಗತಿ ವರದಿ ನಮೂನೆ. |
| ನಮೂನೆ–17 | ನಿಯಮಗಳು 18(2) ಮತ್ತು 19(25) | ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮಗುವನ್ನು ಹಾಜರಪಡಿಸುವ ಸಂದರ್ಭದಲ್ಲಿ ಸಲ್ಲಿಸಬೇಕಾದ ವರದಿ.<br>**REPORT TO BE SUBMITTED AT TIME OF PRODUCTION OF CHILD BEFORE THE COMMITTEE)** | ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015ರ ಕಲಂ 2ರಡಿಯಲ್ಲಿ ನಿರೂಪಿಸಲ್ಪಟ್ಟ ಯಾವುದೇ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವ ಸಂದರ್ಭದಲ್ಲಿ ಮಗುವಿನೊಂದಿಗೆ ಸದರಿ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಹಾಜರುಪಡಿಸುವ ನಮೂನೆ. |

| | | | |
|---|---|---|---|
| ನಮೂನೆ–18 | ನಿಯಮಗಳು 18(5), 18(9) ಮತ್ತು 19(26) | ಮಗುವನ್ನು ಸಂಸ್ಥೆಯಲ್ಲಿರಿಸಲು ಆದೇಶ.<br>**(ORDER OF PLACEMENT OF A CHILD IN AN INSTITUTION)** | ಪೋಷಣೆ ಮತ್ತು ರಕ್ಷಣೆಗಾಗಿ ಅವಶ್ಯವಿರುವ ಮಗುವಿನ ಪ್ರಕರಣದ ವಿಚಾರಣೆಯನ್ನು ಬಾಕಿಯಿರಿಸಿ ತಾತ್ಕಾಲಿಕವಾಗಿ ಸುಧಾರಣಾ ಸಂಸ್ಥೆ, ಅಥವಾ ಅರ್ಹ ಸಂಸ್ಥೆಯಲ್ಲಿರಿಸಲು ಮಕ್ಕಳ ಕಲ್ಯಾಣ ಸಮಿತಿಯು ಹೊರಡಿಸುವ ಆದೇಶದ ನಮೂನೆ. |
| ನಮೂನೆ–19 | ನಿಯಮ 18(8) | ವಿಚಾರಣೆಯನ್ನು ಬಾಕಿಯಿರಿಸಿ, ಮಗುವನ್ನು ತಂದೆ–ತಾಯಿ/ಪೋಷಕರು ಅಥವಾ ಅರ್ಹ ವ್ಯಕ್ತಿಯ ಸುರಕ್ಷೆಯಲ್ಲಿರಿಸಲು ಆದೇಶ.<br>**(ORDER FOR PLACEMENT OF CHILD UNDER THE CARE OF A PARENT, GUARDIAN OR FIT PERSON PENDING INQUIRY).** | ಪೋಷಣೆ ಮತ್ತು ರಕ್ಷಣೆಯ ಅವಶ್ಯವಿರುವ ಮಗುವಿನ ಪ್ರಕರಣದ ವಿಚಾರಣೆಯನ್ನು ಬಾಕಿಯಿರಿಸಿ ಮಗುವನ್ನು ತಂದೆ–ತಾಯಿ/ಪೋಷಕರು ಅಥವಾ ಅರ್ಹ ವ್ಯಕ್ತಿಯ ವಶದಲ್ಲಿರಿಸಲು ಮಕ್ಕಳ ಕಲ್ಯಾಣ ಸಮಿತಿಯು ಹೊರಡಿಸುವ ಆದೇಶದ ನಮೂನೆ. |
| ನಮೂನೆ–20 | ನಿಯಮಗಳು 18(8) ಮತ್ತು 19(7) | ತಂದೆ–ತಾಯಂದಿರು ಅಥವಾ ಪೋಷಕರು ಅಥವಾ ಅರ್ಹ ವ್ಯಕ್ತಿಯ ಮುಚ್ಚಳಿಕೆ ನಮೂನೆ.<br>**(UNDERTAKING BY THE PARENT OR GUARDIAN OR 'FIT PERSON).** | ಪೋಷಣೆ ಮತ್ತು ರಕ್ಷಣೆಯ ಅವಶ್ಯವಿರುವ ಮಗುವಿನ ಪಾಲಕರು, ಪೋಷಕರು ಅಥವಾ ಅರ್ಹ ವ್ಯಕ್ತಿಯು ಮಕ್ಕಳ ಕಲ್ಯಾಣ ಸಮಿತಿಗೆ ಪ್ರಕರಣದ ವಿಚಾರಣೆಗೆ ಎಲ್ಲಾ ಅಗತ್ಯ ನೆರವನ್ನು ನೀಡುತ್ತೇನೆಂದು ಬರೆದುಕೊಡಬೇಕಾದ ಮುಚ್ಚಳಿಕೆ ಪತ್ರದ ನಮೂನೆ. |
| ನಮೂನೆ–21 | ನಿಯಮ 19(3) | ಪೋಷಣೆ ಮತ್ತು ರಕ್ಷಣೆಯ ಅವಶ್ಯವಿರುವ ಮಗುವಿನ ಕುರಿತಂತೆ ಸಾಮಾಜಿಕ ತನಿಖಾ ವರದಿಗಾಗಿ ಆದೇಶ.<br>(**ORDER FOR SOCIAL INVESTIGATION REPORT OF CHILD IN NEED OF CARE AND PROTECTION.)** | ಪೋಷಣೆ ಮತ್ತು ರಕ್ಷಣೆಯ ಅವಶ್ಯವಿರುವ ಮಗುವಿನ ಕುರಿತಂತೆ ಸಾಮಾಜಿಕ ತನಿಖಾ ವರದಿಗಾಗಿ ಮಕ್ಕಳ ಕಲ್ಯಾಣ ಅಧಿಕಾರಿ, ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ, ಸಮಾಜಕಾರ್ಯಕರ್ತ, ಸಂಸ್ಥೆಯ ಅರ್ಹ ಸಿಬ್ಬಂದಿಗಳಿಗೆ ಮಕ್ಕಳ ಕಲ್ಯಾಣ ಸಮಿತಿಯು ಆದೇಶಿಸುವ ಪತ್ರದ ನಮೂನೆ. |
| ನಮೂನೆ–22 | ನಿಯಮ 19(8) | ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಿನ ಸಾಮಾಜಿಕ ತನಿಖಾ ವರದಿ–**SIR**<br>**(Social Investigation Report for CNCP Children)** | ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಗುವಿನ ದೈಹಿಕ, ಶೈಕ್ಷಣಿಕ, ಮನೋ–ಸಾಮಾಜಿಕ, ನೆರೆ–ಹೊರೆಯವರ, ಶಿಕ್ಷಕರ, ಸಹಪಾಠಿಗಳ ಹಾಗೂ ವಿಷಯ ತಜ್ಞರ ಅಭಿಪ್ರಾಯಗಳನ್ನು ಒಳಗೊಂಡಂತೆ ತನಿಖಾ ಅಧಿಕಾರಿ ಅಭಿಪ್ರಾಯಗಳನ್ನು ಒಳಗೊಂಡ ವರದಿ. |

| | | | |
|---|---|---|---|
| ನಮೂನೆ–23 | ನಿಯಮ 19(22) | ಮಗುವನ್ನು ಆಧ್ಯಾರ್ಪಿಸುವ (ಹಾಜರುಪಡಿಸುವ ಅಥವಾ ಪೋಷಣೆ ಮತ್ತು ರಕ್ಷಣೆಗಾಗಿ ಒಪ್ಪಿಸುವ) ಸಲುವಾಗಿ ಅರ್ಜಿ ನಮೂನೆ. **(APPLICATION FOR SURRENDER OF CHILD)** | ಯಾವುದೇ ವೈಯಕ್ತಿಕ, ಸಾಮಾಜಿಕ ಅಥವಾ ಇನ್ನಿತರೇ ಯಾವುದೇ ಕಾರಣಕ್ಕಾಗಿ ಮಗುವಿನ ಪೋಷಣೆ ಮತ್ತು ರಕ್ಷಣೆಯನ್ನು ನಿರ್ವಹಿಸಲು ಅಸಾಧ್ಯವೆಂದು ಭಾವಿಸಿದ ತಂದೆ–ತಾಯಿ ಅಥವಾ ಇವರು ಇಲ್ಲದಿರುವ ಸಂದರ್ಭದಲ್ಲಿ ಆ ಮಗುವಿನ ಹತ್ತಿರದ ಸಂಬಂಧಿಕರು ಮಕ್ಕಳ ಕಲ್ಯಾಣ ಸಮಿತಿಗೆ ಅದರ ಪೋಷಣೆ ಮತ್ತು ರಕ್ಷಣೆಯ ಸಂಪೂರ್ಣ ಜವಾಬ್ದಾರಿಯನ್ನು ನೀಡಲು ಸಲ್ಲಿಸುವ ಅರ್ಜಿ ನಮೂನೆ. |
| ನಮೂನೆ–24 | ನಿಯಮ 19(22) | ಆಧ್ಯಾರ್ಪಣ ಪತ್ರ. **(DEED OF SURRENDER)** | ಯಾವುದೇ ವೈಯಕ್ತಿಕ, ಸಾಮಾಜಿಕ ಅಥವಾ ಇನ್ನಿತರೇ ಯಾವುದೇ ಕಾರಣಕ್ಕಾಗಿ ಮಗುವಿನ ಪೋಷಣೆ ಮತ್ತು ರಕ್ಷಣೆಯನ್ನು ನಿರ್ವಹಿಸಲು ಅಸಾಧ್ಯವೆಂದು ಭಾವಿಸಿದ ತಂದೆ–ತಾಯಿ ಅಥವಾ ಇವರು ಇಲ್ಲದಿರುವ ಸಂದರ್ಭದಲ್ಲಿ ಆ ಮಗುವಿನ ಹತ್ತಿರದ ಸಂಬಂಧಿಕರು ಮಕ್ಕಳ ಕಲ್ಯಾಣ ಸಮಿತಿಗೆ ಅದರ ಪೋಷಣೆ ಮತ್ತು ರಕ್ಷಣೆಯ ಸಂಪೂರ್ಣ ಜವಾಬ್ದಾರಿಯನ್ನು ನೀಡಲು ತಮ್ಮ ಸ್ವ ಇಚ್ಛೆಯಿಂದ ಇ–ಬಾಂಡನಲ್ಲಿ ಬರೆದುಕೊಡಬೇಕಾದ ನಮೂನೆ. |
| ನಮೂನೆ–25 | ನಿಯಮ 19 (29) | ದತ್ತು ಮುಕ್ತ ಆದೇಶದ ನಮೂನೆ. **(CERTIFICATE DECLARING THE CHILD LEGALLY FREE FOR ADOPTION)** | ಮಗುವನ್ನು ಆರ್ಧ್ಯಾಪಿಸಲಾದ ದಿನಾಂಕದಿಂದ ಕನಿಷ್ಠ 60 ದಿನದೊಳಗಾಗಿ ಸಂಬಂಧಿಸಿದ ಪಾಲಕರು, ಪೋಷಕರು ಆಗಮಿಸದೇ ಇದ್ದಲ್ಲಿ, ಅಂತಹ ಮಗುವಿನ ಮುಂದಿನ ಪುನರ್ವಸತಿಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯು ಹೊರಡಿಸುವ ದತ್ತು ಮುಕ್ತ ಆದೇಶದ ನಮೂನೆ. |
| ನಮೂನೆ–26 | ನಿಯಮ 20(1) | ಮಕ್ಕಳ ಕಲ್ಯಾಣ ಸಮಿತಿಯ ಪ್ರಕರಣ ಮೇಲ್ವಿಚಾರಣಾ ಶೀಟ್ (ಸಾರಾಂಶ). **( CASE MONITORING SHEET FOR COMMITTEE)** | ಪೋಷಣೆ ಮತ್ತು ರಕ್ಷಣೆಯ ಅವಶ್ಯವಿರುವ ಮಗುವಿನ ಪ್ರಕರಣದ ಕುರಿತಾಗಿ ಹಾಗೂ ಪ್ರಸ್ತುತ ಸಂದರ್ಭದ ಮಾಹಿತಿಯನ್ನು ಮಕ್ಕಳ ಕಲ್ಯಾಣ ಸಮಿತಿಗೆ ನೀಡುವ ಪ್ರಕರಣದ ಮುಖಪುಟ (ಸಾರಾಂಶ). |
| ನಮೂನೆ–27 | ನಿಯಮಗಳು 21(2) ಮತ್ತು 22(2) | ಮಕ್ಕಳ ಪೋಷಣೆ ಮತ್ತು ರಕ್ಷಣೆಗಾಗಿ ಸಂಸ್ಥೆಗಳು ನೊಂದಾವಣೆಗಾಗಿ ಸಲ್ಲಿಸುವ ಅರ್ಜಿ ನಮೂನೆ. **(APPLICATION FOR REGISTRATION OF CHILD CARE INSTITUTION UNDER THE JUVENILE JUSTICE (CARE AND PROTECTION OF CHILDREN) ACT, 2015)** | ವಸತಿ ಸಹಿತ ಶೈಕ್ಷಣಿಕ ಸಂಸ್ಥೆಯನ್ನು ಹೊರತುಪಡಿಸಿ ಪೋಷಣೆ ಮತ್ತು ರಕ್ಷಣೆಗಾಗಿ ಮಕ್ಕಳನ್ನು ದಾಖಲಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015ರಡಿಯಲ್ಲಿ ನೊಂದಾಯಿಸಿಕೊಳ್ಳಲು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸಬೇಕಾದ ಅರ್ಜಿ ನಮೂನೆ. |
| ನಮೂನೆ–28 | ನಿಯಮಗಳು 21(3) ಮತ್ತು 22(4) | ನೊಂದಣಿ ಪ್ರಮಾಣ ಪತ್ರದ ನಮೂನೆ. **(CERTIFICATE OF REGISTRATION UNDER SECTION 41 THE JJ ACT 2015)** | ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ)ಕಾಯ್ದೆ–2015ರ ಕಲಂ 41ರಡಿಯಲ್ಲಿ ಪೋಷಣೆ ಮತ್ತು ರಕ್ಷಣೆಗಾಗಿ ಸಂಸ್ಥೆಗೆ ದಾಖಲಾದ ಮಕ್ಕಳಿಗೆ ನೀಡಬೇಕಾದ ಕನಿಷ್ಠ ಸೌಲಭ್ಯ ಹಾಗೂ ಆರೈಕೆಯ ಗುಣಮಟ್ಟವನ್ನು ಹೊಂದಿದ ಸಂಸ್ಥೆಗಳಿಗೆ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ಹಕ್ಕುಗಳ ರಕ್ಷಣಾ ಸೊಸೈಟಿ(ರಿ) ಬೆಂಗಳೂರುರವರಿಂದ ನೀಡುವ ಅರ್ಹತೆಯ ಪ್ರಮಾಣ ಪತ್ರದ ನಮೂನೆ. |

| | | | |
|---|---|---|---|
| ನಮೂನೆ–29 | ನಿಯಮ 22(9) | ಮಾಸಿಕ ವರದಿ.**(MONTHLY REPORT SUBMITTED BY OPEN SHELTER TO DCPU)** | ಸುಧಾರಣಾ ಸಂಸ್ಥೆಗಳು ಹಾಗೂ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸಲ್ಲಿಸ ಬೇಕಾದ ಮಾಸಿಕ ಪ್ರಗತಿ ವರದಿಯ ನಮೂನೆ. |
| ನಮೂನೆ–30 | ನಿಯಮ 23(9) | ಭವಿಷ್ಯವರ್ತಿ ಸಾಕು ಪಾಲಕರ ಗೃಹ ಅಧ್ಯಯನ ವರದಿ. **(HOME STUDY REPORT FOR PROSPECTIVE FOSTER PARENTS.)** | ಕಾರಾ ಸಂಸ್ಥೆಯ ನಿಬಂಧನೆಗೊಳಪಟ್ಟು ಸಂಸ್ಥೆಗೆ ಅರ್ಜಿ ಸಲ್ಲಿಸಿದ ಭವಿಷ್ಯವರ್ತಿ (ದತ್ತು ಪಡೆಯಲು ಇಚ್ಛಿಸಿದ)ಸಾಕು ಪಾಲಕರ ಗೃಹ ಅಧ್ಯಯನ ವರದಿ ನಮೂನೆ. |
| ನಮೂನೆ–31 | ನಮೂನೆ–23(4) | ಮಗುವಿನ ಅಧ್ಯಯನ ವರದಿ. **(CHILD STUDY REPORT)** | ದತ್ತು ಕೇಂದ್ರ, ವಿಶೇಷ ದತ್ತು ಕೇಂದ್ರದಲ್ಲಿ ದಾಖಲಾಗಿ ಭವಿಷ್ಯಾವರ್ತಿ (ದತ್ತು ನೀಡುವಾಗ) ಪಾಲಕರೊಂದಿಗೆ ಸೇರಿಸಲ್ಪಟ್ಟ ಮಗುವಿನ ಮನೆಭೇಟಿ ಮಾಡಿ, ಮಗು, ಪಾಲಕರೊಂದಿಗೆ ಆಪ್ತಸಮಾಲೋಚಿಸಿ ಸಲ್ಲಿಸ ಬೇಕಾದ ವರದಿ ನಮೂನೆ. |
| ನಮೂನೆ–32 | ನಿಯಮ 23(15) | ಕುಟುಂಬ/ಗುಂಪು ಸಾಕು ಸಂರಕ್ಷಣೆಗಾಗಿ ಮಗುವನ್ನು ನೀಡಲು ಆದೇಶ. **(ORDER OF FOSTER CARE PLACEMENT WITH A FAMILY OR GROUP FOSTER CARE)** | ಮಗುವಿಗೆ ಕೌಟುಂಬಿಕ ಪರಿಸರವನ್ನು ಒದಗಿಸಲು ಅರ್ಹ ವ್ಯಕ್ತಿ ಅಥವಾ ಅರ್ಹ ಗುಂಪಿನೊಂದಿಗೆ ಮಗುವನ್ನು ಸೇರಿಸಲು ಮಕ್ಕಳ ಕಲ್ಯಾಣ ಸಮಿತಿಯು ಹೊರಡಿಸುವ ಆದೇಶದ ನಮೂನೆ. |
| ನಮೂನೆ–33 | ನಿಯಮ 23(16) | ಸಾಕು ಕುಟುಂಬ ಗುಂಪು ಸಂರಕ್ಷಣಾ ಸಂಸ್ಥೆಯಿಂದ ಮುಚ್ಚಳಿಕೆ. **(UNDERTAKING BY THE FOSTER FAMILY/GROUP FOSTER CARE ORGANISATION)** | ಮಕ್ಕಳ ಕಲ್ಯಾಣ ಸಮಿತಿಯಿಂದ ಮಗುವಿಗೆ ಕೌಟುಂಬಿಕ ಪರಿಸರವನ್ನು ಒದಗಿಸಲು ಒಪ್ಪಿ ಎಲ್ಲಾ ನಿಂಭದನೆಗಳನ್ನು ಪೂರೈಸಿದ ವ್ಯಕ್ತಿ ಅಥವಾ ಸಂಸ್ಥೆ ಮಗುವನ್ನು ತನ್ನ ವಶಕ್ಕೆ ಪಡೆಯುವ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ನೀಡಬೇಕಾದ ಮುಚ್ಚಳಿಕೆ ಪತ್ರದ ನಮೂನೆ. |
| ನಮೂನೆ–34 | ನಿಯಮ 23(17) | ಸಾಕು ಸಂರಕ್ಷಣೆಯಲ್ಲಿರುವ ಮಗುವಿನ ದಾಖಲೆಗಳು. **(RECORD OF A CHILD IN FOSTER CARE)** | ಸಾಕು ಪಾಲಕರ ಅಥವಾ ಸಂಸ್ಥೆಯ ಸಂರಕ್ಷಣೆಯಲ್ಲಿರುವ ಮಕ್ಕಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಿರ್ವಹಿಸಲು ದತ್ತು ಕೇಂದ್ರ ಅಥವಾ ವಿಶೇಷ ದತ್ತು ಕೇಂದ್ರಗಳು ನಿರ್ವಹಿಸ ಬೇಕಾದ ದಾಖಲಾತಿಗಳ ಪರಿವಿಡಿ ಪಟ್ಟದ ನಮೂನೆ |
| ನಮೂನೆ–35 | ನಿಯಮ 23(18) | ಸಾಕು ಕುಟುಂಬ ಮತ್ತು ಗುಂಪು ಸಂರಕ್ಷಣಾ ಮಾಸಿಕ ತಪಾಸಣೆ. **(MONTHLY INSPECTION OF FOSTER FAMILIES/GROUP FOSTER CARE)** | ಸಾಕು ಪಾಲಕರ ಅಥವಾ ಸಂಸ್ಥೆಯ ಸಂರಕ್ಷಣೆಯಲ್ಲಿರುವ ಮಗುವಿನ ಮಾಸಿಕ ಪ್ರಗತಿ ವರದಿಯ ಬಗ್ಗೆ ಸಾಕು ಪಾಲಕರ ಅಥವಾ ಸಂಸ್ಥೆಯನ್ನು ಭೇಟಿ ನೀಡಿ ಸಲ್ಲಿಸಬೇಕಾದ ಮಾಸಿಕ ಪ್ರಗತಿ ವರದಿಯ ನಮೂನೆ. |
| ನಮೂನೆ–36 | ನಿಯಮ 24(5) | ಪ್ರಾಯೋಜಕತ್ವದಲ್ಲಿ ಇರಿಸುವ ಆದೇಶ. **(ORDER OF SPONSORSHIP PLACEMENT)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮತ್ತು ಪೋಷಣೆ ಮತ್ತು ರಕ್ಷಣೆಯ ಅವಶ್ಯವಿರುವ ಮಗುವಿನ ಪುನರ್ವಸತಿಗಾಗಿ ಬಾಲ ನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿಯಿಂದ ಆ ಮಗುವಿಗೆ ನಿರ್ದಿಷ್ಟಪಡಿಸಿದ ಮೊತ್ತವನ್ನು, ನಿರ್ದಿಷ್ಟಪಡಿಸಿದ ಅವಧಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನೀಡುವಂತೆ ನಿರ್ದೇಶಿಸುವ ಆದೇಶದ ನಮೂನೆ. |

| | | | |
|---|---|---|---|
| ನಮೂನೆ–37 | ನಿಯಮ 25(2) | ಸಂರಕ್ಷಣೆಯ ನಂತರ ಇರಿಸುವಿಕೆಯ ಆದೇಶ.<br>**(ORDER OF AFTER CARE PLACEMENT)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳು ಮತ್ತು ಪೋಷಣೆ ಮತ್ತು ರಕ್ಷಣೆಗೊಳಪಟ್ಟ ಮಕ್ಕಳು ಸಂರಕ್ಷಣಾ ಕೇಂದ್ರಗಳಲ್ಲಿ 18 ವರ್ಷ ದಾಟಿದ ನಂತರ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಯು ಹೆಚ್ಚಿನ ವರ್ಷದ ಸಂರಕ್ಷಣೆಗಾಗಿ ನೀಡುವ ಆದೇಶ ನಮೂನೆ. (21 ವರ್ಷದ ತನಕ). |
| ನಮೂನೆ–38 | ನಿಯಮ 27(2) | **ಗುಂಪು ಸಂರಕ್ಷಣೆಯೂ ಸೇರಿದಂತೆ ಅರ್ಹ ಸೌಲಭ್ಯಕ್ಕಾಗಿ ಅರ್ಜಿ.**<br>**(APPLICATION FOR FIT FACILITY INCLUDING GROUP FOSTER CARE)** | ಪೋಷಣೆ ಮತ್ತು ಸಂರಕ್ಷಣೆಯ ಮಕ್ಕಳಿಗೆ ಗುಂಪು ಸಂರಕ್ಷಣೆಗೆ (ಫಾಸ್ಟರ್ ಕೇರ್) ಹಾಗೂ ಇತರ ಸೌಲಭ್ಯಗಳನ್ನು ನೀಡಲು ಮಕ್ಕಳ ಸಂರಕ್ಷಣಾ ಸಂಸ್ಥೆಗಳು ಸಲ್ಲಿಸುವ ಅರ್ಜಿ ನಮೂನೆ. |
| ನಮೂನೆ–39 | ನಿಯಮ 27(4) | ಗುಂಪು ಸಂರಕ್ಷಣೆಯೂ ಸೇರಿದಂತೆ ಅರ್ಹ ಸೌಲಭ್ಯ ಕ್ಕೆ ಮಾನ್ಯತೆ ನೀಡುವ ಪ್ರಮಾಣ ಪತ್ರ.<br>**(CERTIFICATE OF RECOGNITION OF FIT FACILITY INCLUDING GROUP FOSTER CARE)** | ಫಾಸ್ಟರ್ ಕೇರ್‌ಗೆ ಅರ್ಹ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಪ್ರಮಾಣ ಪತ್ರ ನಮೂನೆ. |
| ನಮೂನೆ–40 | ನಿಯಮಗಳು 61(3)( xii) | ನೊಂದಾಯಿತ ಸಂಸ್ಥೆಗಳು ಪ್ರತಿ ವಾರ ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸ ಬೇಕಾದ ಮಕ್ಕಳ ಪಟ್ಟಿ.<br>**(LIST OF CHILDREN SUBMITTED BY CCI TO BOARD OR COMMITTEE WEEKLY)** | ನೊಂದಾಯಿತ ಸಂಸ್ಥೆಗಳು ಪ್ರತಿ ವಾರ ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸ ಬೇಕಾದ ಮಕ್ಕಳ ಪಟ್ಟಿ. |
| ನಮೂನೆ–41 | ನಿಯಮ 69(ಸಿ)(1) | ಸಂರಕ್ಷಣಾ ವಶದ ಕಾರ್ಡ್.<br>**(PROTECTIVE CUSTODY CARD)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗುವನ್ನು ಸಂರಕ್ಷಣೆಗಾಗಿ ಮಕ್ಕಳ ಪೋಷಣಾ ಮತ್ತು ರಕ್ಷಣಾ ನೊಂದಾಯಿತ ಸಂಸ್ಥೆಗಳಿಗೆ ಮಕ್ಕಳ ನ್ಯಾಯ ಮಂಡಳಿ ನೀಡುವ ಆದೇಶ ನಮೂನೆ. |
| ನಮೂನೆ–42 | ನಿಯಮ 69(ಡಿ)(4) | ರಾತ್ರಿಯಲ್ಲಿ ಸಂರಕ್ಷಣಾ ವಾಸ್ತವ್ಯ.<br>**(OVERNIGHT PROTECTIVE STAY)** | ರಾತ್ರಿ ವೇಳೆ ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳನ್ನು ವಾಸ್ತವ್ಯಕ್ಕಾಗಿ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳಿಗೆ ನೀಡುವ ಅರ್ಜಿ ನಮೂನೆ. |
| ನಮೂನೆ–43 | ನಿಯಮ 69(ಎಚ್)(3) | ಮಗುವಿನ ಪ್ರಕರಣದ ಹಿನ್ನಲೆ.<br>**(CASE HISTORY OF THE CHILD, FOR CHILD CARE INSTITUTION)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳ ಮತ್ತು ಪೋಷಣೆ ಮತ್ತು ರಕ್ಷಣೆಗೊಳಪಟ್ಟ (ಮಗುವಿನ) ಪ್ರಕರಣದ ಹಿನ್ನೆಲೆ ಒದಗಿಸುವ ನಮೂನೆ. |

| | | | |
|---|---|---|---|
| ನಮೂನೆ–44 | ನಿಯಮ 82(1) | ಬಿಡುಗಡೆ ಹಾಗೂ ಸ್ಥಿರೀಕರಣ ಆದೇಶ. **(RELEASE CUM RESTORATION ORDER)** | ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗುವನ್ನು ಬಿಡುಗಡೆ ಮಾಡುವ ಆದೇಶ ನಮೂನೆ. |
| ನಮೂನೆ–45 | ನಿಯಮ 82(4) | ಬೆಂಗಾವಲು ಆದೇಶ **(ESCORT ORDER)** | ಪೋಷಣೆ ಮತ್ತು ರಕ್ಷಣೆ ಅಥವಾ ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳನ್ನು (ಮಗುವನ್ನು) ಬೇರೆ – ಬೇರೆ ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳಿಗೆ ವರ್ಗಾಯಿಸಲು ಬೇಕಾದ ಪೊಲೀಸ್ ಬೆಂಗಾವಲಿಗೆ ಸೂಚಿಸಿದ ಅರ್ಜಿ ನಮೂನೆ. |
| ನಮೂನೆ–46 | ನಿಯಮಗಳು 41(3)ಯಿಂದ41(9) | ಬಾಲ ನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿ ತಪಾಸಣಾ ನಮೂನೆ. **(INSPECTION BY INSPECTION COMMITTEE)** | ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳಿಗೆ 3 ತಿಂಗಳಿಗೊಮ್ಮೆ ಭೇಟಿ ನೀಡುವ ತಪಾಸಣಾ ಸಮಿತಿಗಳ ತಪಾಸಣಾ ವರದಿ ನಮೂನೆ. |

**ದಯವಿಟ್ಟು ಗಮನಿಸಿ;** ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015ಕ್ಕೆ ರೂಪಿತವಾದ 2016ರ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮದಲ್ಲಿ ಹೇಳಲಾಗಿರುವ 46 ನಮೂನೆಗಳ ಕನ್ನಡ ವಿವರ ಮೇಲೆ ನೀಡಲಾಗಿದೆ. ಕನ್ನಡ ಭಾಷಾಂತರವು ಕೇವಲ ಅರ್ಥ ಮಾಡಿಕೊಳ್ಳಲು ಮಾತ್ರ. ಹೆಚ್ಚಿನ ವಿವರ, ಸ್ಪಷ್ಟತೆಗಾಗಿ ಮತ್ತು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಮೂಲ ಇಂಗ್ಲೀಷ್ ಪ್ರತಿಯನ್ನು ಬಳಸುವುದು. ***(ಕನ್ನಡ ಅನುವಾದ ಮತ್ತು ತಯಾರಿ: ರವಿಕುಮಾರ್ ಸಮಾಜ ಕಾರ್ಯಕರ್ತರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕೊಪ್ಪಳ.)***